# ನಿಮ್ಮೊಡನೆ

## ಸಲ್ಲದ ಬೆಳವಣಿಗೆ

ರಾಜ್ಯದಲ್ಲಿ ಮಾನವ ಹಕ್ಕುಗಳ ಆಯೋಗ ಅಸ್ತಿತ್ವಕ್ಕೆ ಬಂದು ಮೂರು ವರ್ಷಗಳು ಕಳೆದಿವೆ. ಸುಪ್ರೀಂ ಕೋರ್ಟ್ ನಿರ್ದೇಶನದ ಅನ್ವಯ ರಾಜ್ಯ ಸರ್ಕಾರ ಆಯೋಗವನ್ನು ಅಸ್ತಿತ್ವಕ್ಕೆ ತಂದಿದೆ. ಆಯೋಗದ ಕಾರ್ಯನಿರ್ವಹಣೆಗೆ ಕಚೇರಿ, ಸಿಬ್ಬಂದಿ ಮತ್ತಿತರ ಪೂರಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ವ್ಯತ್ಯಾಸಗಳಾಗಿರಬಹುದಾದರೂ ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳು ದಾಖಲಾಗುವುದರಲ್ಲಿ ಕೊರತೆ ಬಂದಿಲ್ಲ. ಮಾನವ ಹಕ್ಕು ಉಲ್ಲಂಘನೆ ಎಂಬ ಪರಿಭಾಷೆ ಸಾರ್ವಜನಿಕರಿಗೆ ಕೇಳುತ್ತಿದ್ದುದೇ  ಪೊಲೀಸರ ವಶದಲ್ಲಿದ್ದ ವ್ಯಕ್ತಿ ಸತ್ತಾಗ. ಮಾನವ ಹಕ್ಕುಗಳಿಗೆ ಹೋರಾಟ ನಡೆಸುವ ಪಿಯುಸಿಎಲ್‌ನಂಥ ಸಂಘಟನೆಗಳು ಉಲ್ಲಂಘನೆಯ ಪ್ರಕರಣಗಳನ್ನು ಬಯಲಿಗೆ ತರುತ್ತಿದ್ದುದು ಕೂಡ ಈ ಕುರಿತ ಜಾಗೃತಿಗೆ ಕಾರಣವಾಗಿದೆ.

ದೂರನ್ನು ಕೇಳುವ ವ್ಯವಸ್ಥೆ ಇದೆ ಎಂದಾಗ ಆಗುವ ಪರಿಣಾಮಗಳು ಬೇರೆ. ರಾಜ್ಯದಲ್ಲಿ ಮಾನವ ಹಕ್ಕು ಆಯೋಗ ಅಸ್ತಿತ್ವಕ್ಕೆ ಬಂದ ಮೂರು ವರ್ಷಗಳಲ್ಲಿ 23 ಸಾವಿರ ಪ್ರಕರಣಗಳು ದಾಖಲಾಗಿವೆ ಎಂದರೆ ಸಮಾಜದಲ್ಲಿ ಆಗುತ್ತಿರುವ ಅನ್ಯಾಯ ಪರಂಪರೆಯ ಅರಿವಾಗದಿರದು. ಅದುವರೆಗೆ ತಮಗೆ ಆಗುತ್ತಿದ್ದ ಅನ್ಯಾಯಗಳನ್ನು ಜನತೆ ಮೌನವಾಗಿ ಸಹಿಸಿಕೊಂಡೇ ಬಂದಿದ್ದರು ಎಂಬುದು ಇದರಿಂದ ಸ್ಪಷ್ಟ. ತಮ್ಮ ದೂರನ್ನು ಕೇಳಿಸಿಕೊಳ್ಳಲು ಒಂದು ಸಾಂವಿಧಾನಿಕ ವ್ಯವಸ್ಥೆ ಇದೆ ಎಂಬುದು ಗೊತ್ತಾದಾಗ ದೂರು ನೀಡಲು ಮುಂದಾಗಿದ್ದಾರೆ. ಇದು ಜನತೆಯಲ್ಲಿ ತಮ್ಮ ಹಕ್ಕಿನ ಬಗ್ಗೆ ಮೂಡಿದ ಜಾಗೃತಿ. ಜನ ದೂರು ಕೊಡದಿದ್ದರೂ ಬಹಳಷ್ಟು ಪ್ರಕರಣಗಳನ್ನು ಮಾನವ ಹಕ್ಕು ಆಯೋಗವೇ ಪತ್ರಿಕಾ ವರದಿಗಳನ್ನು ಆಧರಿಸಿ ಸ್ವಯಂ ದಾಖಲು ಮಾಡಿಕೊಂಡಿದೆ. ಇದು ಸರ್ಕಾರವೇ ಜನರ ಸಮಸ್ಯೆಗೆ ಸ್ಪಂದಿಸಲು ಅವರ ಬಳಿಗೆ ಹೋದಂತಹ ಬೆಳವಣಿಗೆ. ಇದು ನಿಜಕ್ಕೂ ಶ್ಲಾಘನೀಯ ಕಾರ್ಯ. ಆಯೋಗವನ್ನು ಅಸ್ತಿತ್ವಕ್ಕೆ ತಂದಿರುವುದಕ್ಕೂ ಸಾರ್ಥಕವಾದ ಕೆಲಸ. ಇದರ ಶ್ರೇಯಸ್ಸು ಆಯೋಗವನ್ನು ಜನಪರವಾಗಿ ಪರಿಚಯಿಸುತ್ತಿರುವ ಅಧ್ಯಕ್ಷರಿಗೆ ಸಲ್ಲಬೇಕು. ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ, ಮಾಧ್ಯಮಗಳಲ್ಲಿ ಪ್ರಸ್ತಾಪಿಸುವ ಮೂಲಕ ಜನ ತಮ್ಮಲ್ಲಿ ವಿಶ್ವಾಸ ಇಟ್ಟುಕೊಳ್ಳುವಂತೆ ಅವರು ಮಾಡಿದ್ದಾರೆ. ಇದು ಮಹತ್ವದ ಕಾರ್ಯ.

ಮೂರು ವರ್ಷಗಳಲ್ಲಿ ದಾಖಲಾದ ಪ್ರಕರಣಗಳನ್ನು ಲೆಕ್ಕಹಾಕಿದರೆ ರಾಜ್ಯದಲ್ಲಿ ಪ್ರತಿನಿತ್ಯ ಇಪ್ಪತ್ತಕ್ಕೂ ಹೆಚ್ಚಿನ ಪ್ರಕರಣಗಳು ಮಾನವ ಹಕ್ಕು ಉಲ್ಲಂಘನೆಗೆ ಸಂಬಂಧಿಸಿದ್ದವು ಎಂಬುದು ಗೊತ್ತಾಗುತ್ತದೆ. ನಿತ್ಯವೂ ಈ ಬಗೆಯ ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಿವೆ ಎಂದರೆ ದಾಖಲಾಗದ ಪ್ರಕರಣಗಳ ಸಂಖ್ಯೆ ಇನ್ನಷ್ಟು ಹೆಚ್ಚಿನದು ಎಂಬುದರಲ್ಲಿ ಸಂಶಯವಿಲ್ಲ. ಇದು ಕರ್ನಾಟಕದ ಸಾಮಾಜಿಕ ಪರಂಪರೆಗೆ ಸಲ್ಲದ ಬೆಳವಣಿಗೆ. ಮಾನವೀಯ ನಡವಳಿಕೆ ಕುರಿತಾಗಿ ಯಾವುದೇ ಬಗೆಯ ಅಧಿಕಾರ ಕೇಂದ್ರವು ದಬ್ಬಾಳಿಕೆ ದೌರ್ಜನ್ಯ ನಡೆಸುತ್ತಿದೆ ಎಂಬುದರ ಸಂಕೇತ. ಅದು ಸರ್ಕಾರದ ಸೇವಾ ಇಲಾಖೆ ಇರಬಹುದು, ಅಧಿಕಾರ ಸ್ಥಾನ ಇರಬಹುದು, ಸಾಮಾನ್ಯ ಜನತೆಯ ಗೌರವಾನ್ವಿತ ಹಕ್ಕನ್ನು ಕಡೆಗಣಿಸುತ್ತಿರುವುದರ ಪರೋಕ್ಷ ಸೂಚನೆ ಇದು. ಇದು ದೂರಿನ ಸ್ವರೂಪದಲ್ಲಿ ಬಹಿರಂಗವಾಗುತ್ತಿರುವುದು ಇಡೀ ಆಡಳಿತ ವ್ಯವಸ್ಥೆ ಸೂಕ್ಷ್ಮತೆಯನ್ನು ಕಳೆದುಕೊಂಡಿರುವುದನ್ನು ಅನಾವರಣಗೊಳಿಸುತ್ತದೆ.

ಸಾಮಾಜಿಕ ಜೀವನದಲ್ಲಿ ವಂಚನೆ, ಅವಕಾಶ ನಿರಾಕರಣೆ, ಅನಗತ್ಯವಾದ ಹಿಂಸೆ, ದೌರ್ಜನ್ಯ ಮೊದಲಾದವು ನಡೆಯುತ್ತಾ ಅದನ್ನು ಅನುಭವಿಸುವವರು ತಮ್ಮನ್ನು ಕೇಳುವವರಿಲ್ಲದ ಅಸಹಾಯಕತೆಯಿಂದ ನರಳುವ ಪರಿಸ್ಥಿತಿ  ಮುಂದುವರಿಯುತ್ತಿದ್ದರೆ ಅಲ್ಲಿ ವ್ಯವಸ್ಥೆ ಕುಸಿದಿದೆ ಎಂದೇ ಅರ್ಥ. ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದ್ದರೆ ಅಲ್ಲಿ ನಾಗರಿಕ ಆಡಳಿತ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬ ಸಂದೇಶವೇ ಧ್ವನಿಸುತ್ತದೆ. ಆಡಳಿತ ಸೂತ್ರ ಹಿಡಿದವರು ಸಾಮಾನ್ಯ ಜನತೆಯ ನೋವಿಗೆ ನೈಜ ಕಾಳಜಿಯಿಂದ ಸ್ಪಂದಿಸುವವರಿದ್ದರೆ ಇಂಥ ಪರಿಸ್ಥಿತಿ ಏರ್ಪಡುವುದಿಲ್ಲ. ಅಧಿಕಾರ ಸಿಕ್ಕಿರುವುದು ಹಣ ಮಾಡುವುದಕ್ಕಾಗಿ, ಆಸ್ತಿ ಮಾಡುವುದಕ್ಕಾಗಿ, ಮತ್ತೆ ಮತ್ತೆ ಚುನಾವಣೆಯಲ್ಲಿ ಗೆಲುವು ಸಾಧಿಸಿ ಅಧಿಕಾರದಲ್ಲಿ ನಿರಂತರವಾಗಿ ಮುಂದುವರಿಯುವುದಕ್ಕಾಗಿ ಎಂದು ಭಾವಿಸುವ ಆಡಳಿತ ವ್ಯವಸ್ಥೆಯಲ್ಲಿ ಜನರ ಸಂಕಷ್ಟ ಅರಣ್ಯರೋದನ. ಇದು ಬದಲಾಗಬೇಕಿದ್ದರೆ ನಿಜವಾಗಿಯೂ ಜನರ ಪರವಾದ ರಾಜ್ಯಾಡಳಿತ ಅಸ್ತಿತ್ವಕ್ಕೆ ಬರುವುದು ಅವಶ್ಯಕ.

■ ಲಕ್ಷ್ಮಣ ಕೊಡಸೆ

**ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದ್ದರೆ ಅಲ್ಲಿ ನಾಗರಿಕ ಆಡಳಿತ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂದೇ ಅರ್ಥ. ಆಡಳಿತ ಸೂತ್ರ ಹಿಡಿದವರು ಸಾಮಾನ್ಯ ಜನತೆಯ ನೋವಿಗೆ ಸ್ಪಂದಿಸಿದರೆ ಇಂಥ ಪರಿಸ್ಥಿತಿ ಏರ್ಪಡುವುದಿಲ್ಲ.**

